**ಇಂದು ದಿನಾಂಕ:** 29.04.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 9 ಮತ್ತು 10 ನೇ ಪ್ರತಿವಾದಿಗಳ ಪರ ಶ್ರೀ.ಜಿ.ಜಿ. ವಕೀಲರಿಂದಃ**

ನಾನು ಮತ್ತು ವಾದಿಗಳು ಪಿರಿಯಾಪಟ್ಟಣದ ಸಣ್ಣಯ್ಯನ ಬೀದಿಯಲ್ಲಿ ವಾಸವಿದ್ದೇವೆ. ನನ್ನ ಮತ್ತು ವಾದಿಗಳ ಮನೆ ಎದುರು ಬದುರು ಇದೆ. ಸಣ್ಣಯ್ಯನ ಬೀದಿಯಲ್ಲಿ ಸುಮಾರು 50–60 ಮನೆಗಳು ಇವೆ ಎಂದರೆ ಸರಿ. ಸಾಧಾರಣ 20 ಮನೆಗಳ ಹಿರಿಯರು ಮತ್ತು ಅವರ ವಂಶವೃಕ್ಷದ ಬಗ್ಗೆ ಗೊತ್ತಿದೆ. ಅವರೆಲ್ಲವ ವಂಶವೃಕ್ಷವನ್ನು ನಾನು ಬರೆದು ಇಟ್ಟುಕೊಂಡಿಲ್ಲ, ಗೊತ್ತಿದೆ. ಈ ಕೇಸಿನಲ್ಲಿ 10–12 ಜನ ವಾದಿಗಳು ಇದೆ. 6–7 ಜನರ ವಿರುದ್ಧ ಕೇಸು ಹಾಕಿರಬಹುದು. ವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ಸಾಧಾರಣವಾಗಿ ಗೊತ್ತಿದೆ.

ದಾವಾ ಆಸ್ತಿಗಳ ಎಲ್ಲಾ ಆಸ್ತಿಗಳ ಚೆಕ್ಕುಬಂಧಿ ಗೊತ್ತಿಲ್ಲ ಕೆಲವು ಆಸ್ತಿಗಳಿಗೆ ಗೊತ್ತಿದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಆಸ್ತಿ ಇರುವುದಿಲ್ಲ. ಬೇರೆಯವರ ಜಮೀನುಗಳ ಹದ್ದುಬಸ್ತು ತಿಳಿದುಕೊಳ್ಳುವ ಅಭ್ಯಾಸ ನನಗೆ ಇರುವುದಿಲ್ಲ. 12 ಆಸ್ತಿಗಳಿಗೆ ಕೇಸು ಹಾಕಿದ್ದಾರೆ. ಆಸ್ತಿಗಳು ಪೋಡಾಗಿವೆ. ಸ.ನಂ.109/1 ಮತ್ತು 108/7 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಸರಿಯಾಗಿ ಗೊತ್ತಿಲ್ಲ ಹಾಗೂ ಅದರ ಚೆಕ್ಕುಬಂಧಿ ಗೊತ್ತಿಲ್ಲ. ನಾಗಪ್ಪ ಎಂಬುವರು ಕಪನಯ್ಯನವರ ಮೊಮ್ಮಕ್ಕಳಿಗೆ ಜಮೀನು ಮಾರಾಟ ಮಾಡಿದ್ದಾರೆ. ಅದರ ಸರ್ವೆ ನಂಬರ್ ಗೊತ್ತಿಲ್ಲ. ನಾಗಯ್ಯ ಮತ್ತು ಚೆನ್ನಪ್ಪನವರಿಗೆ ಕೇಸು ನಡೆದಿರುವುದು ಗೊತ್ತಿಲ್ಲ. ಆ ಕೇಸಿನ ಸರ್ವೆ ನಂಬರ್ ಮತ್ತು ಚೆಕ್ಕುಬಂಧಿ ಗೊತ್ತಿಲ್ಲ.

ಪಿರಿಯಾಪಟ್ಟಣದ ತೋಟಗಳನ್ನು 5–6 ಹಂಚಿಕೊಂಡಿದ್ದಾರೆ ಎಂದರೆ ಸರಿ. ಸಣ್ಣನಾಗಯ್ಯನವರಿಗೆ ತೋಟ ಬಂದಿದೆ ಎಂದರೆ ಸರಿ. ಅವರ ಮಗನೇ ಬಿ.ಎನ್.ನಾಗಪ್ಪ ಎಂದರೆ

ಸರಿ. ಚೆನ್ನಪ್ಪನವರ ವಿರುದ್ಧ ಕೇಸು ಹಾಕಿ ನ್ಯಾಯಾಲಯದಲ್ಲಿ ಡಿಕ್ರಿಯಾಗಿರುವುದು ನನಗೆ ಗೊತ್ತಿಲ್ಲ. ಕಪನಯ್ಯನವರನ್ನು ನಾನು ನೋಡಿಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**